# ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೊ

(Version – 1)

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 264.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 216.
3. **Note:** Lyrics given here are as per Ref. 1. The wordings in Ref. 2 are completely different and is listed as separate song as "gALi banda kaiyalli thUri koLLiro – version 2" (ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೊ – version 2).
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
5. **Note:** Singer has followed these lyrics.

ರಾಗ: ಧನ್ಯಾಸಿ ತಾಳ: ರೂಪಕ

ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೊ || ಪ ||
ನಾಳೆ ಎನ್ನಬೇಡಿ ಇದೇ ವೇಳೆ ಬನ್ನಿರೊ || ಅಪ ||

ವಾಸವಾದಿವಿನುತ ವೈಕುಂಠದೊಡೆಯ ನಮ್ಮ ಹೃದಯ
ವಾಸನೆಂದು ಬಿಡದೆ ಕೇಶವನ್ನ ನೆನೆಯಿರೊ || ೧ ||

ಹೇಯ ಸಂಸಾರದ ಮರ್ಮ ಛಾಯವದು ಮಾಯುವಂತೆ
ಬಾಯಿ ಮುಚ್ಚಿಕೊಳ್ಳದೆ ನಾರಾಯಣನ್ನ ನೆನೆಯಿರೊ || ೨ ||

ಬೋಧಗಳಲ್ಲಿ ಸದ್ಗುರುಬೋಧೆ ಇದು ಎಂದೆನುತ
ಗಾದೆಗಳೆಲ್ಲನು ಬಿಟ್ಟು ಮಾಧವನ ನೆನೆಯಿರೊ || ೩ ||

ಇಂದಿನ ದಿನವೇ ಸುದಿನ ಇಂದಿನ ಸೊಲ್ಲೆ ಲೇಸೆಂದು
ಇಂದಿರಾರಮಣ ಗೋವಿಂದನ್ನ ನೆನೆಯಿರೊ || ೪ ||

ಘನ್ನ ದೇವರ್ಕಳಿಗಿನ್ನು ಮಹಿಮನು ಹರಿ
ಅನ್ಯವಿಲ್ಲವೆಂದು ಶ್ರೀವಿಷ್ಣುವನ್ನು ನೆನೆಯಿರೊ || ೫ ||

ಸಾಧನೆಯ ಭಕ್ತಿಯೊಳು ಶೋಧನೆಗೈಯುತ್ತ ಕಂಡೆ
ಈ ಧನವೆನುತ ಮಧುಸೂದನನ್ನ ನೆನೆಯಿರೊ || ೬ ||

ಶಕ್ರನಿಗೆ ಒಲಿದು ಜಗಚ್ಚಕ್ರವನ್ನು ಅಳೆದು ಮತ್ತೆ
ಶುಕ್ರ ಶಿಷ್ಯನ ಗೆಲಿದ ತ್ರಿವಿಕ್ರಮನ್ನ ನೆನೆಯಿರೊ || ೭ ||

ಒಮ್ಮೆ ನೆನೆಯಲು ಭುಕ್ತಿ ಒಮ್ಮೆ ನೆನೆಯಲು ಮುಕ್ತಿ
ಒಮ್ಮನ ಪೂರ್ವಕದಿಂದ ವಾಮನನ್ನ ನೆನೆಯಿರೊ || ೮ ||

ಈ ಧರೆ ರಮಣನೆ ನಮ್ಮ ಆಧಾರ ದೊರೆಯು ಬೇರೆ
ಆಧಾರವ ಕಾಣೆನೆಂದು ಶ್ರೀಧರನ್ನ ನೆನೆಯಿರೊ || ೯ ||

ಕಾಸಿಗೆ ಕೈಚಾಚುವಂಥ ಆಶಾಪಾಶವನ್ನು ತೊರೆದು
ಕಾಶಿವಾಸವಿನುತ ಹೃಷಿಕೇಶನನ್ನ ನೆನೆಯಿರೊ || ೧೦ ||

ಈ ಭವತಿಮಿರಕ್ಕೆ ಕೋಟಿ ವಿಭಾವಸು ಸಂಕಾಶ
ಶೋಭನಾಕಾರ ಪದ್ಮನಾಭನನ್ನ ನೆನೆಯಿರೊ || ೧೧ ||

ಈ ದುರಾಚಾರ ಗಿರಿ ಬಿದುರವೆಂದರಿತು ಸನು-
ಮೋದದಿಂದ ಮನದಿ ದಾಮೋದರನ್ನ ನೆನೆಯಿರೊ || ೧೨ ||

ಪುರುಷನಾಗಿ ಹುಟ್ಟಿ ನೂರು ವರುಷ ಬದುಕಿದುದಕೆ ಫಲವ
ಹರುಷದಿಂದ ಪಡೆಯೆ ಸಂಕರುಷಣನ ನೆನೆಯಿರೊ || ೧೩ ||

ಇವನೆ ಸರ್ವಶರಣ್ಯ ಇವನೆ ಲೋಕೈಕ ಮಾನ್ಯ
ದೇವದೇವೋತ್ತಮ ವಾಸುದೇವನನ್ನ ನೆನೆಯಿರೊ || ೧೪ ||

ವಿದ್ಯೆ ಬೇಕು ಬುದ್ಧಿ ಬೇಕು ಸಿದ್ಧಿ ಬೇಕು ಎಂಬುವರು
ಪ್ರದ್ಯುಮ್ನ ಪ್ರದ್ಯುಮ್ನನೆಂದು ನೆನೆಯಿರೊ || ೧೫ ||

ಕದ್ದು ಹುಸಿಯನಾಡಿ ಅಪರಬುದ್ಧಿಯಿಂದ ಕೆಡಲಿಬೇಡಿ
ಬುದ್ಧಿವಂತರಾಗಿ ಅನಿರುದ್ಧನ್ನ ನೆನೆಯಿರೊ || ೧೬ ||

ನಿತ್ಯ ನೇಮವೆಂಬೋದಿಲ್ಲ ಮತ್ತೆ ದಾನಧರ್ಮವಿಲ್ಲ
ವ್ಯರ್ಥವಾಗಿ ಕೆಡದೆ ಪುರುಷೋತ್ತಮನ್ನ ನೆನೆಯಿರೊ || ೧೭ ||

ರಕ್ಷೆ ಯಂತ್ರ ಮಂತ್ರ ತಂತ್ರಾಪೇಕ್ಷೆ ಬೇಡ ನಿಮ್ಮ ಜನ್ಮ
ಮೋಕ್ಷವನ್ನು ಪಡೆಯಲು ಅಧೋಕ್ಷಜನ್ನ ನೆನೆಯಿರೊ || ೧೮ ||

ಬ್ರಹ್ಮನಾಗಿ ನಿರ್ಮಿಸಿ ಪರಬ್ರಹ್ಮನಾಗಿ ರಕ್ಷಿಸಿ
ಸಂಹಾರಕ್ಕೆ ರುದ್ರ ನಾರಸಿಂಹನನ್ನ ನೆನೆಯಿರೊ || ೧೯ ||

ಮುಚ್ಚುಮರೆಯ ಮಂತ್ರವಲ್ಲ ವೆಚ್ಚ ಒಂದು ಕಾಸು ಇಲ್ಲ
ನೆಚ್ಚದೆ ಸಂಸಾರ ಶ್ರೀಮದಚ್ಯುತನ್ನ ನೆನೆಯಿರೊ || ೨೦ ||

ಕಾದ್ರುವೇಯ ಶಯನ ಕರುಣಾದ್ರ್ರಹೃದಯನ ನಿತ್ಯ
ಭದ್ರದಾಯಕ ಶ್ರೀ ಜನಾರ್ದನನ್ನ ನೆನೆಯಿರೊ || ೨೧ ||

ಇಂದ್ರಿಯಂಗಳೇಕವಾಗಿ ಚಂದ್ರಿಕೆ ತೆರದಿ ಸುತ್ತಿ
ತೊಂದರೆ ತಾರದ ಮುನ್ನುಪೇಂದ್ರನನ್ನ ನೆನೆಯಿರೊ || ೨೨ ||

ಹರಿಹರಿಯೆನಲು ದುರಿತ ಹರಿದು ಓಡುವುದು ತ್ವರಿತ
ಹಿರಿದು ಭಕ್ತಿಯಿಂದ ಸಿರಿ ಹರಿಯನ್ನು ನೆನೆಯಿರೊ || ೨೩ ||

ಕೃಷ್ಣನ ನಾಮವೇ ಗತಿ ಕೃಷ್ಣನ ಪಾದವೇ ಗತಿ
ಕಷ್ಟವೆಲ್ಲ ನೀಗಲು ಶ್ರೀಕೃಷ್ಣನನ್ನ ನೆನೆಯಿರೊ || ೨೪ ||

ಭುಕ್ತಿ ಕೊಡುವ ಮುಕ್ತಿ ಕೊಡುವ ಮತ್ತೆ ಸಾಯುಜ್ಯ ಕೊಡುವ
ಶಕ್ತ ನಮ್ಮ ಪುರಂದರವಿಠಲನ್ನ ನೆನೆಯಿರೊ || ೨೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದು ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಕುರಿತ ಪದ.

**ವಾಸವಾದಿ** – ಇಂದ್ರನೇ ಮೊದಲಾದ ದೇವತೆಗಳಿಂದ.

**ಗಾಥೆಗಳೆಲ್ಲನು** – ಗಾಹೆ; ಲೌಕಿಕ ಕತೆ, ಪ್ರಸಂಗ, ಹರಟೆ.

**ಶುಕ್ರಶಿಷ್ಯನ** – ದೈತ್ಯಗುರುವಾದ ಶುಕ್ರಚಾರ್ಯರ ಶಿಷ್ಯ ಬಲಿಚಕ್ರವರ್ತಿಯನ್ನು.

**ಭುಕ್ತಿ** – ಪ್ರಾಪಂಚಿಕ ಸಂಪತ್ತು.

**ಭವತಿಮಿರಕ್ಕೆ...** – ಸಂಸಾರವೆಂಬ ಕತ್ತಲೆಗೆ ವಿರೋಧಿಯಾಗಿ ಕೋಟಿಸೂರ್ಯರಂತೆ ಹೊಳೆಯುವ.

**ಗಿರಿ ಬಿದುರ** – ಬಿಡಿಸುವುದು ಶಿಥಿಲಗೊಳಿಸುವುದು; ಕೆಟ್ಟ ನಡತೆಯೆಂಬ ಬೆಟ್ಟವನ್ನು ಸಡಿಲಿಸುವುದು.

**ಬಿದುರವು** – ಅಲ್ಲಾಡುವುದಿಲ್ಲ.

**ಅಪರಬುದ್ಧಿ** – ಹೀನಬುದ್ಧಿ.

**ಕಾದ್ರವೇಯ ಶಯನ** – ಕದ್ರುವಿನ ಮಗ, ಸರ್ಪ; ಶೇಷ; ಅದರ ಮೇಲೆ ಪವಡಿಸಿದವನು.

**ಭದ್ರದಾಯಕ** – ಮಂಗಳವನ್ನು ನೀಡುವವನು.

**ಇಂದ್ರಿಯಂಗಳೇಕವಾಗಿ...** – ಇಂದ್ರಿಯಗಳೆಲ್ಲ ಮನಸ್ಸಿನ ವಶವಾಗಿದ್ದು, ಮನಸ್ಸಿನಲ್ಲೇ ಮುಗಿಯುತ್ತವೆ. ಇಂದ್ರಿಯಗಳೆಲ್ಲ ಮನಸ್ಸಿನಲ್ಲಿ ಒಂದಾಗಿ; ಏಕಾಗ್ರಚಿತ್ತದಿಂದ.

**ಚಂದ್ರಿಕೆ ತೆರದಿ ಸುತ್ತಿ** – ಬೆಳದಿಂಗಳಿನಂತೆ ಪಸರಿಸಿ.

**ತೊಂದ್ರೆ** – ತೊಂದರೆ.

**ಸಾಯುಜ್ಯ** – ನಾಲ್ಕು ಬಗೆಯ ಮುಕ್ತಿಗಳಲ್ಲಿ ಒಂದು (ಉಳಿದ ಮೂರು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ).

**Classification:** Keerthane

**Ankita:** Purandara Vittala

**Location:** NA

**Category:** Keshava Nama, Vishnu Stuti,

**Sub-Category:** Vishnu, Narayana, Krishna, papa, bhakti, mukti, Lakshmi, kai, vaikunta, hrudaya, samsara, bayi, dina, deva, loka, chakra, bhumi, arasa, rokka, kashi, mana, parvata, huttu, phala, santosha, buddi, dAna, dharma, vyartha, mantra, janma, moksha, brahma, parabrahma, shiva,

**Pravachana:** NA

**Explanation:** NA